ಸಹಿತ 'ಇಂದಿರಾಬಾಯಿ'ಯ ಪ್ರಭಾವ ಇರುವುದನ್ನೆಲ್ಲ ಬರೆದೆ. ಕನ್ನಡದಲ್ಲಿ ಸಾಕಷ್ಟು ಕೆಲಸ ಮಾಡುವುದಿತ್ತು. ಅಲ್ಲದೇ ತುಂಬ ಅಧಿಕೃತವಾಗಿ ನಾನು ಹೇಳಬಹುದಾದ ವಿಷಯಗಳಿದ್ದವು. ಹಾಗಾಗಿ ಇಂಗ್ಲಿಷ್ ಬಿಟ್ಟು ಕನ್ನಡದಲ್ಲಿ ಬರೆಯಲು ತೊಡಗಿದೆ. ಲಿಟರರಿ ಸ್ಕಾಲರ್‌ಷಿಪ್ ಅಂದರೆ ಏನು? 'ಬೆಟ್ಟದ ಜೀವ' ಮತ್ತು 'ಸೂರ್ಯನ ಕುದುರೆ' ಎರಡೂ ಓದಿರದಿದ್ದರೆ ಅದರ ನಡುವಿನ ಹೋಲಿಕೆ ಗೊತ್ತಾಗುವುದಿಲ್ಲ. ಹಾಗೆ ಹೋಲಿಕೆ ಇದೆ ಎಂದಾಕ್ಷಣ ಆ ಕೃತಿಗಳ ಮಹತ್ವ ಕಡಿಮೆಯೇನೂ ಆಗುವುದಿಲ್ಲ.

● **ಇಂದು ಲಿಟರರಿ ಸ್ಕಾಲರ್‌ಷಿಪ್ ಯಾಕೆ ಕಡಿಮೆಯಾಗುತ್ತಿದೆ?**

ಅದಕ್ಕೆ ಒಂದು ಸಾತತ್ಯ ಬೇಕಾಗುತ್ತದೆ. ಎಲ್ಲಿಯವರೆಗೆ ಜ್ಞಾನದ ದೃಷ್ಟಿಯಿಂದ ಪರಾವಲಂಬಿ ಆಗಿರುತ್ತೇವೆಯೋ ಅಲ್ಲಿಯವರೆಗೆ ಹೊಸತನ್ನು ಹೇಳುವುದು ಸಾಧ್ಯವಾಗುವುದಿಲ್ಲ. ನಾವಾಗಿಯೇ ಜ್ಞಾನವನ್ನು ಸೃಷ್ಟಿಸುವ ಶಕ್ತಿಯನ್ನು ನಮ್ಮ ಶಿಕ್ಷಣ, ಸಮಾಜ ಕೊಡಬೇಕಾಗುತ್ತದೆ. ಅಂಥ ಪರಿಸ್ಥಿತಿಯನ್ನು ಸೃಷ್ಟಿಸಬೇಕು. ಇನ್ನೊಂದು ಏನಾಗಿದೆ ಎಂದರೆ ನಮ್ಮಲ್ಲಿ, ರಾಜಕೀಯ ಪ್ರಭಾವ ಎನ್ನುವುದು ಪಾರದರ್ಶಕತೆಗೆ ಅಡ್ಡಬರುತ್ತದೆ. ನಾನು ರಾಜಕಾರಣದ ಮಹತ್ವವನ್ನು ಅಲ್ಲಗಳೆಯುತ್ತಿಲ್ಲ. ಅದಿಲ್ಲದೆ ಏನೂ ಸಾಧ್ಯವಿಲ್ಲ. ಆದರೆ ಒಂದು ಪಾರದರ್ಶಕ ವಾತಾವರಣ ಇಲ್ಲದಿದ್ದರೆ ಕಷ್ಟ. ಎಷ್ಟೇ ವಿಕ್ಷಿಪ್ತ ಹೇಳಿಕೆ ಇರಲಿ, ಅದಕ್ಕೆ ಅವಕಾಶ ಇರಬೇಕು. ಹಿಂದೆ ಆ ವಾತಾವರಣ ಇತ್ತು. ಚಾರ್ವಾಕರು, 'ದೇವರಿಲ್ಲ, ಆತ್ಮ ಇಲ್ಲ, ಇರುವುದೊಂದೇ ದೇಹ' ಎಂದರು. ಅವರಿಗೆ ವಿರೋಧ ಬಂತು. ಆದರೂ ಅವರು ತಮಗೆ ಅನಿಸಿದ್ದನ್ನು ಹೇಳಲು ಅವಕಾಶ ಇತ್ತು. ಚಾರ್ವಾಕ ಮತ ಅಂತಲೇ ಆಯ್ತು. ಈ ಅವಕಾಶ ಇರದೇ ಹೋದರೆ ಗಿಳಿಪಾಠದ ಸಂಸ್ಕೃತಿ ಬರುತ್ತದೆ. ಒಬ್ಬರು ಹೇಳಿದ್ದನ್ನೇ ಉಳಿದವರು ಪಠಿಸುತ್ತಾ ಇರುತ್ತಾರೆ. ಆಗ ಲಿಟರರಿ ಸ್ಕಾಲರ್‌ಷಿಪ್ ಹುಟ್ಟಿಕೊಳ್ಳುವುದಿಲ್ಲ.

● **ನಮ್ಮಲ್ಲಿ ಎರಡು ಪ್ರಕಾರಗಳಿವೆ. ಒಂದು ಭಾರತ ಕಾವ್ಯಮೀಮಾಂಸೆಯ ರಸ ಸಿದ್ಧಾಂತದಿಂದ ಕೃತಿವಿಮರ್ಶೆ ಮಾಡುವುದು. ಇನ್ನೊಂದು ಪಾಶ್ಚಾತ್ಯ ತತ್ತ್ವಗಳಿಂದ ವಿಮರ್ಶಿಸುವುದು. ಈಗ ನಮ್ಮಲ್ಲಿ 20ನೇ ಶತಮಾನದ ಉತ್ತರಾರ್ಧದಲ್ಲಿ ದಲಿತರು, ಮುಸ್ಲಿಮರೆಲ್ಲ ಬರೆಯುತ್ತಿದ್ದಾರೆ. ಅವರ ಕೃತಿಗಳನ್ನು ವಿಮರ್ಶೆ ಮಾಡಬೇಕಾದರೆ ಯಾವ ವಿಮರ್ಶಾಮಾನದಂಡಗಳು ಇರಬೇಕು? ಅಥವಾ ಆ ವಿಮರ್ಶಾಮಾನದಂಡಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕಾ?**

ಹೊಸ ಕೃತಿ ಹುಟ್ಟಿದಾಗ, ತೀರಾ ಹೊಸ ಪ್ರಕಾರ ಹುಟ್ಟಿದಾಗ ವಿಮರ್ಶೆಯ ಹಳೆಯ ಮಾನದಂಡಗಳು ಉಪಯೋಗಕ್ಕೆ ಬರುವುದಿಲ್ಲ. ಇದು ಬರೀ ಸಾಹಿತ್ಯಕ್ಕಷ್ಟೇ ಮೀಸಲಲ್ಲ. ಒಂದು ಕಾಲಕ್ಕೆ, ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದು ಒಳ್ಳೆಯದು ಎಂದು ಇರುತ್ತದೆಯೋ ಅದು ಎಲ್ಲ ಕಾಲಕ್ಕೂ ಎಲ್ಲ ವ್ಯವಸ್ಥೆಯಲ್ಲಿಯೂ ಒಳ್ಳೆಯದೇ ಆಗಿರುತ್ತದೆಂದು ಹೇಳಲಿಕ್ಕೆ ಬರುವುದಿಲ್ಲ. ಮಾನದಂಡಗಳು ಬದಲಾಗುತ್ತವೆ. ಡಾರ್ವಿನ್ ಸಿದ್ಧಾಂತ ಬಂದ ಮೇಲೆ ಕ್ರಿಶ್ಚಿಯಾನಿಟಿ ಅಸ್ಥಿರವಾಯ್ತು. ರಾಮಾಯಣಕ್ಕೆ ಪಾಶ್ಚಾತ್ಯ ಮಹಾಕಾವ್ಯಗಳ ವಿಮರ್ಶಾ ಮಾನದಂಡಗಳನ್ನು ಅನ್ವಯಿಸಹೊರಟರೆ ಅದು ಸಂಪೂರ್ಣ ವಿಫಲವಾಗುತ್ತದೆ. ಯಾಕೆಂದರೆ ಅವರ ಮಹಾಕಾವ್ಯಗಳ ರೀತಿಯೇ ಬೇರೆ, ನಮ್ಮ ರಾಮಾಯಣ ಮಹಾಭಾರತಗಳೇ ಬೇರೆ. ಇವುಗಳನ್ನು ನಾವು ಮಹಾಕಾವ್ಯ ಅಂತಲೂ ಅನ್ನುವುದಿಲ್ಲ, ಇತಿಹಾಸ ಅನ್ನುತ್ತೇವೆ. ಕಾಳಿದಾಸನದು ನಿಜವಾದ ಕಾವ್ಯ. ಅದನ್ನು ವಿಮರ್ಶಿಸುವ ಮಾನದಂಡಗಳೂ ಬದಲಾಗಲೇ ಬೇಕಾಗುತ್ತದೆ.

ಮಾತಿನಿಂದ ಬರಹಕ್ಕೆ: ಪದ್ಮನಾಭ ಭಟ್